ದಿನಾಂಕ 11.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಬೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

ದಿನಾಂಕ 21.02.2022 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಾಯಂಕಾಲ 8.00 ಗಂಟೆಗೆ ತನುಜಾ ಸುಣಗಾರ ಎಂಬುವವರು ಠಾಣೆಗೆ ಹಾಜರಾಗಿ ಕೊಟ್ಟ ಲಿಖಿತ ದೂರನ್ನು ಸ್ವೀಕರಿಸಿ ಅದನ್ನು ಠಾಣಾ ಗುನ್ನಾ ನಂಬರ 27/2022 ಕಲಂ 452, 323, 324, 307, 504, 506 ಐಪಿಸಿ ಪ್ರಕಾರ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿದ್ದು ಚಾಸಾ.21 ರವರ ಮುಖಾಂತರ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ದೂರು ನಿಶಾನೆ ಪಿ-1 ರಲ್ಲಿ ಸಾಕ್ಷಿ ಸಹಿಯನ್ನು ನಿಶಾನೆ ಪಿ-1(ಬಿ) ಎಂದು ಗುರ್ತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ-23 ಎಂದು ಮತ್ತು ನನ್ನ ಸಹಿಯನ್ನು ನಿಶಾನೆ ಪಿ-23(ಎ) ಎಂದು ಗುರ್ತಿಸಲಾಯಿತು.

ರಾತ್ರಿ 9.30 ಗಂಟೆಗೆ ಆರೋಪಿಯನ್ನು ಹುಡುಕಲು ಕ್ರೈಂ ಸಿಬ್ಬಂದಿಯನ್ನು ನೇಮಿಸಿರುತ್ತೇನೆ.

ನಂತರ ಮರುದಿನ 22.02.2022 ರಂದು ನಾನು ಘಟನಾ ಸ್ಥಳಕ್ಕೆ ಹೋಗಿ ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿದ್ದೇನೆ. ಮಹೇಶ ದವಳೆ ಮತ್ತು ರಾಜು ಶೇಖಪ್ಪಾ ಕಟ್ಟಿ ಎಂಬುವವರನ್ನು ಪಂಚರಾಗಿ ಕರೆಸಿರುತ್ತೇನೆ. ನಂತರ ಲೈನ ಬಜಾರ, ವಡ್ಡರ ಓಣಿ, ಧಾರವಾಡದ ಹತ್ತಿರ ಇರುವ ಕೊರವರ ಓಣಿಯಲ್ಲಿರುವ ಘಟನಾ ಸ್ಥಳ ಫಿರ್ಯಾದಿಯ ಮನೆಗೆ ಹೋಗಿದ್ದು ಫಿರ್ಯಾದುದಾರಳಾದ ತನುಜಾ ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿದ್ದೇನೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ನಿಶಾನೆ ಪಿ–2 ಪಂಚನಾಮೆಯಲ್ಲಿ ನನ್ನ ಸಹಿಯನ್ನು ನಿಶಾನೆ ಪಿ–2(ಡಿ) ಎಂದು ಗುರುತಿಸಲಾಯಿತು. ನಂತರ ಸ್ಥಳದಲ್ಲಿ ಫೋಟೋ ತೆಗೆದಿದ್ದೇವೆ. ಸದರಿ ಫೋಟೋಗಳನ್ನು ಈಗಾಗಲೇ ನಿಶಾನೆ ಪಿ–3 ಮತ್ತು 4 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಶಾನೆ ಪಿ–4(ಎ) ಎಂದು ಗುರುತಿಸಲಾಯಿತು.

ಫಿರ್ಯಾದಿಯ ಬಟ್ಟೆ ಜಪ್ತ ಪಂಚನಾಮೆಯನ್ನು ದಿನಾಂಕ 22.02.2022 ರಂದು ಸಾಯಂಕಾಲ 16 ರಿಂದ 17 ಗಂಟೆವರೆಗೆ ನಿಶಾನೆ ಪಿ–5 ರಂತೆ ಮಾಡಿದ್ದೇನೆ. ಫಿರ್ಯಾದಿಯ ತಂದೆಯು ಬಟ್ಟೆಯನ್ನು ತಂದು ಠಾಣೆಗೆ ಹಾಜರುಪಡಿಸಿದ್ದಾರೆ. ನಿಶಾನೆ ಪಿ–5 ರಲ್ಲಿ ನನ್ನ ಸಹಿಯನ್ನು ನಿಶಾನೆ

ಪಿ–5(ಡಿ) ಎಂದು ಗುರುತಿಸಲಾಯಿತು. ಫಿರ್ಯಾದಿಯ ತಂದೆ ತಂದು ಹಾಜರುಪಡಿಸಿದ ಬಟ್ಟೆಗಳಲ್ಲಿ ಎಂ ಓ 2 ಎಂದು ಈಗಾಗಲೇ ಗುರುತಿಸಲಾದ ತಿಳಿ ಹಸಿರು ಬಣ್ಣದ ಟಾಪ, ಎಂ ಓ 3 ಎಂದು ಈಗಾಗಲೇ ಗುರುತಿಸಲಾದ ಕಪ್ಪು ಮತ್ತು ಬಿಳಿ ಬಣ್ಣದ ಪ್ಯಾಂಟ, ಎಂ ಓ 4 ಎಂದು ಈಗಾಗಲೇ ಗುರುತಿಸಲಾದ ಕಪ್ಪು ಕಲರಿನ ವೇಲ್, ಎಂ ಓ 5 ಎಂದು ಈಗಾಗಲೇ ಗುರುತಿಸಲಾದ ಕಂದು ಬಣ್ಣದ ಅಂಡರವೇರ ಮತ್ತು ಎಂ ಓ 6 ಎಂದು ಈಗಾಗಲೇ ಗುರುತಿಸಲಾದ ಕಪ್ಪು ಬಣ್ಣದ ಬ್ರಾ ವನ್ನು ಹಾಜರುಪಡಿಸಿದ್ದು ಇರುತ್ತದೆ.

**ಈ ಹಂತದಲ್ಲಿ ಸಾಕ್ಷಿಯು ಕೇಸಿನ ಬಗ್ಗೆ ನೋಟ್ಸ ಮಾಡಿಕೊಂಡು ಬಂದಿದ್ದರೂ ತಾನು ಮಾಡಿದ ತನಿಖೆಯ ಬಗ್ಗೆ ಯಾವುದೇ ರೀತಿಯಲ್ಲಿ ಸರಿಯಾಗಿ ತನಿಖೆಯ ಬಗ್ಗೆ ಸಾಕ್ಷಿ ಹೇಳಲು ಅಸಮರ್ಥನಾಗಿದ್ದು ನ್ಯಾಯಾಲಯದ ಸಮಯವನ್ನು ವ್ಯರ್ಥಮಾಡುತ್ತಿದ್ದ ಕಾರಣ ಸರಕಾರಿ ಅಭಿಯೋಜಕರು ಕೇಸನ್ನು ಮುಂದೂಡುವಂತೆ ಕೋರಿಕೊಂಡಿದ್ದು ಸಾಕ್ಷಿಯು ಈಗಾಗಲೇ 2 ನೇ ಬಾರಿ ನ್ಯಾಯಾಲಯಕ್ಕೆ ಬರುತ್ತಿದ್ದು ಈ ಹಿಂದೆ ನ್ಯಾಯಾಲಯವು ಎಚ್ಚರಿಕೆ ಕೊಟ್ಟಿದ್ದರೂ ಈ ದಿನ ಸರಕಾರಿ ಅಭಿಯೋಜಕರ ಕಚೇರಿಗೆ ಹೋಗುವುದಾಗಲೀ ಅಥವಾ ತಾನಾಗಿಯೂ ಸರಿಯಾಗಿ ಸಾಕ್ಷಿ**

**ಹೇಳುವುದಾಗಲೀ ಮಾಡಿರುವುದಿಲ್ಲ ಆದ್ದರಿಂದ ಸಾಕ್ಷಿಯ ಮುಖ್ಯವಿಚಾರಣೆಯನ್ನು ಸರಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಮುಂದೂಡಲಾಗಿದೆ ಮತ್ತು ಈ ಹೇಳಿಕೆಯ ಪ್ರತಿಯನ್ನು ಅವರ ಮೇಲಾಧಿಕಾರಿಗಳಿಗೆ ಕಳಿಸುವಂತೆ ನಿರ್ದೇಶಿಸಲಾಗಿದೆ.**

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಇದೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.

ನಿಶಾನೆ ಪಿ-6 ರ ಪ್ರಕಾರ ಮಾಡಿದ್ದು ನನ್ನ ಸಹಿ ನಿಶಾನೆ ಪಿ-6(ಸಿ) ಎಂದು ಗುರ್ತಿಸಲಾಯಿತು. ಸ್ಥಳದಲ್ಲಿ ನಿಶಾನೆ ಪಿ 7 ರ ಪ್ರಕಾರ ಪೋಟೋವನ್ನು ತೆಗೆದಿರುತ್ತೇವೆ.

ದಿನಾಂಕ 10.09.2019 ರಂದು ಚಾಸಾ.2 ಮತ್ತು 3 ರವರಿಗೆ ನೋಟೀಸು ನೀಡಿ ಕಲಘಟಗಿ ಸರಕಾರಿ ಆಸ್ಪತ್ರೆ ಶವಾಗಾರಕ್ಕೆ ಭೇಟಿ ನೀಡಿದ್ದು ಚಾಸಾ-2, ಚಾಸಾ-3 ರವರನ್ನು ಪಂಚರಾಗಿ ಹಾಜರುಪಡಿಸಿ ಅವರ ಸಮಕ್ಷಮ ಚಾಸಾ.1 ರವರು ತೋರಿಸಿದಂತೆ ಆಸ್ಪತ್ರೆಯ ಶವಗಾರದಲ್ಲಿದ್ದ ಮೃತ ವೀರಭದ್ರಪ್ಪ ಸತ್ತೂರ ಇವರ ಶವ ಪಂಚನಾಮೆಯನ್ನು ನಿಶಾನೆ ಪಿ-6 ರ ಪ್ರಕಾರ ಮಾಡಿದ್ದು ನನ್ನ ಸಹಿ ನಿಶಾನೆ ಪಿ-6(ಸಿ) ಎಂದು ಗುರ್ತಿಸಲಾಯಿತು. ಸ್ಥಳದಲ್ಲಿ ನಿಶಾನೆ ಪಿ 7 ರ ಪ್ರಕಾರ ಪೋಟೋವನ್ನು ತೆಗೆದಿರುತ್ತೇವೆ.

ನಂತರ ಶವವನ್ನು ಪೋಸ್ಟ ಮಾರ್ಟಮ್ ಪರೀಕ್ಷೆಗಾಗಿ ಕೋರಿಕೆ ಪತ್ರ ಕೊಟ್ಟಿರುತ್ತೇನೆ. ಪೋಸ್ಟ ಮಾರ್ಟಮ್ ಮುಗಿದ ನಂತರ ಶವವನ್ನು ವಾರಸುದಾರರಿಗೆ ಬಿಟ್ಟು ಕೊಟ್ಟಿರುತ್ತೇವೆ. ಶವಪರೀಕ್ಷೆಗಾಗಿ ವೈದ್ಯಾದಿಕಾರಿಗೆ ಕೊಟ್ಟ ಕೋರಿಕೆ ಪತ್ರದ ಪ್ರತಿಯನ್ನು ನಿಶಾನೆ ಪಿ-57 ಎಂದು ಮತ್ತು

ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ-57(ಎ) ಎಂದು ಗುರ್ತಿಸಲಾಯಿತು. ಶವಪರೀಕ್ಷೆಗಾಗಿ ಕಳುಹಿಸಿದ ಮೃತ ದೇಹದೊಂದಿಗೆ ಸಲ್ಲಿಸಿದ ವರದಿಯನ್ನು ನಿಶಾನೆ ಪಿ-58 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ-58(ಎ) ಎಂದು ಗುರ್ತಿಸಲಾಯಿತು. ಈಗ ನನಗೆ ತೋರಿಸಿದ ಒಟ್ಟು ಎಳು ಫೋಟೋಗಳನ್ನು ಶವಪರೀಕ್ಷೆ ಕಾಲಕ್ಕೆ ತೆಗೆಸಿದ್ದು ಸದರಿ ಫೋಟೋಗಳನ್ನು ನಿಶಾನೆ ಪಿ-59 ರಿಂದ ಪಿ-65 ಎಂದು ಮತ್ತು ನನ್ನ ಸಹಿಯನ್ನು ನಿಶಾನೆ ಪಿ-65(ಎ)ಎಂದು ಗುರ್ತಿಸಲಾಯಿತು. ಈ ಬಗ್ಗೆ ಪಾವತಿಯನ್ನು ಪಡೆದಿದ್ದು ನಿಶಾನೆ ಪಿ-66 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ-66(ಎ) ಎಂದು ಗುರ್ತಿಸಲಾಯಿತು. ಅದೇ ದಿನ ಚಾಸಾ.1 ರವರ ಮರುಹೇಳಿಕೆ ಪಡೆದಿರುತ್ತೇನೆ.

ನಂತರ ಹುಬ್ಬಳ್ಳಿಯ ಬಾಲಾಜಿ ಆಸ್ಪತ್ರೆಯಿಂದ ಎಂಎಲಸಿ ಮಾಹಿತಿ ಬಂದಿದ್ದು ಅದರಲ್ಲಿ ರವಿ ವೀರಭದ್ರಪ್ಪ ಸತ್ತೂರ ಇವರು ಮೃತರಾದ ಬಗ್ಗೆ ತಿಳಿಸಿದ್ದು, ಶವಪಂಚನಾಮೆ ಮಾಡುವಂತೆ ಚಾಸಾ.45 ಪಿಎಸಐರವರಿಗೆ ನಾನು ಸೂಚನೆ ಕೊಟ್ಟು ಕಳಿಸಿರುತ್ತೇನೆ. ಅವರು ಅದೇ ದಿನ ಇನಕ್ವೆಷ್ಟ ಪಂಚನಾಮೆಯನ್ನು, ಫೋಟೋವನ್ನು ಮತ್ತು ಚಾಸಾ.19 ಮತ್ತು 24 ರ ಹೇಳಿಕೆಗಳನ್ನು ಹಾಜರುಪಡಿಸಿರುತ್ತಾರೆ.

ಅದೇ ದಿನ ಕಲಘಟಗಿ ಸರಕಾರಿ ಆಸ್ಪತ್ರೆಯ ಆವರಣದಲ್ಲಿ ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಬೆಳಿಗ್ಗೆ 8.30 ರಿಂದ 9.30 ರವರೆಗೆ ಚಾಸಾ.1 ಮತ್ತು 20 ರವರ ರಕ್ತ ಹತ್ತಿದ ಮೂರು ಬಟ್ಟೆಗಳನ್ನು ಪಂಚರಾದ ಚಾಸಾ.2 ಮತ್ತು 3 ರವರ ಸಮಕ್ಷಮ ನಿಶಾನೆ ಪಿ-8 ರಂತೆ ಪಂಚನಾಮೆ ಮಾಡಿ ಸ್ವಾಧೀನ ಪಡಿಸಿಕೊಂಡಿದ್ದು, ನಿಶಾನೆ ಪಿ-8 ರಲ್ಲಿ ನನ್ನ ಸಹಿಯನ್ನು ನಿಶಾನೆ ಪಿ-8(ಸಿ) ಎಂದು ಗುರ್ತಿಸಲಾಯಿತು.

ಸ್ಥಳದಲ್ಲಿ ಒಂದು ಹಸಿರು, ಬಿಳಿ, ಕಪ್ಪು ಬಣ್ಣದ ಪಟ್ಟಿಯ ಅರ್ಧ ತೋಳಿನ ಟೀ ಶರ್ಟು ಅದಕ್ಕೆ ರಕ್ತ ಹತ್ತಿದ್ದು ಅದನ್ನು ಈಗಾಗಲೇ ಎಂ ಓ 15 ಎಂದು ಗುರುತಿಸಲಾಗಿದ್ದು, ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಒಂದು ಸಿಮೆಂಟ ಕಲರಿನ ಫುಲ್ ತೋಳಿನ ಶರ್ಟು ಅದಕ್ಕೆ ರಕ್ತ ಹತ್ತಿದ್ದು ಅದನ್ನು ಈಗಾಗಲೇ ಎಂ ಓ 16 ಎಂದು ಗುರುತಿಸಲಾಗಿದ್ದು, ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಒಂದು ಬಿಳಿ ಬಣ್ಣದ ಬನಿಯನ್ ಅದಕ್ಕೆ ಅಲ್ಲಲ್ಲಿ ರಕ್ತ ಹತ್ತಿದ್ದು ಅದನ್ನು ಈಗಾಗಲೇ ಎಂ ಓ 17 ಎಂದು ಗುರುತಿಸಲಾಗಿದ್ದು, ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಅದೇ ದಿನ ಮಧ್ಯಾಹ್ನ 12.15 ಗಂಟೆಗೆ ಆರೋಪಿತರಾದ 1 ರಿಂದ 4, 6 ರಿಂದ 17 ರವರನ್ನು ಸಿಬ್ಬಂದಿಗಳು ಮತ್ತು ನಾನು ಕರೆತಂದು ವಿಚಾರಣೆ

ಮಾಡಿ ದಸ್ತಗಿರಿ ಕ್ರಮ ಅನುಸರಿಸಿ ದಸ್ತಗಿರಿ ಮಾಡಿರುತ್ತೇನೆ. ಅವರ ಸ್ವಖುಷಿ ಹೇಳಿಕೆ ಪಡೆದಿರುತ್ತೇನೆ.

1 ನೇ ಆರೋಪಿಯಾದ ಬಸವರಾಜ ಅಕ್ಕಿಯು ತನ್ನ ಸ್ವಖುಷಿ ಹೇಳಿಕೆಯಲ್ಲಿ ನಾನು ಕೃತ್ಯಕ್ಕೆ ಉಪಯೋಗಿಸಿದ ತಲವಾರನ್ನು ಒಂದು ಕಡೆ ಮುಚ್ಚಿಟ್ಟಿರುತ್ತೇನೆ ನನ್ನನ್ನು ಕರೆದುಕೊಂಡು ಹೋದರೆ ನಾನು ಕಲ್ಲಪ್ಪನಿಗೆ ಹೊಡೆಯಲು ಉಪಯೋಗಿಸಿದ ತಲವಾರನ್ನು ಮತ್ತು ಒಳಸಂಚು ರೂಪಿಸಿದ ಜಾಗ ಮತ್ತು ಬಟ್ಟೆಗಳನ್ನು ಎಸೆದ ಜಾಗವನ್ನು ತೋರಿಸುತ್ತೇನೆ ಎಂದು ಹೇಳಿದ್ದು ಸದರಿ ಹೇಳಿಕೆಯ ಭಾಗವನ್ನು ಮಾತ್ರ ನಿಶಾನೆ ಪಿ–67 ಎಂದು ಗುರುತಿಸಲಾಯಿತು.

ನ್ಯಾಯಾಂಗ ಬಂಧನದಲ್ಲಿರುವ ಆರೋಪಿತರಲ್ಲಿ ಒಬ್ಬನನ್ನು ಸಾಕ್ಷಿಯು ಪ್ರಹ್ಲಾದ ಚುಳಕಿ ಎಂದು ಗುರುತಿಸಿದ್ದು, 2 ನೇ ವ್ಯಕ್ತಿಯನ್ನು ಪೂಜಾರ ಎಂದು ಗುರುತಿಸಿರುತ್ತಾರೆ. 3 ಮತ್ತು 4 ನೇ ಆರೋಪಿತರ ಹೆಸರು ನೆನಪಾಗುತ್ತಿಲ್ಲ ಎಂದು ಹೇಳುತ್ತಾರೆ. ನ್ಯಾಯಾಲಯದಲ್ಲಿರುವ ಆರೋಪಿತರ ಪೈಕಿ ಮಲ್ಲಪ್ಪ ಚುಳಕಿ, ಕೃಷ್ಣಾ ಚುಳಕಿ, ಪೂಜಾರ ಇವರನ್ನು ಗುರುತಿಸಿದ್ದು ಉಳಿದ ಎಲ್ಲಾ ಆರೋಪಿಗಳನ್ನು ತಾನು ದಸ್ತಗಿರಿ ಮಾಡಿದ್ದು ಈಗ ಹೆಸರು ಕನಫ್ಯೂಸ ಆಗುತ್ತಿದೆ ಮತ್ತು ನೆನಪಿಲ್ಲ ಎಂದು ಸಾಕ್ಷ ಹೇಳುತ್ತಾರೆ.

ಅದೇ ದಿನ ಚಾಸಾ.20 ರವರ ಹೇಳಿಕೆಯನ್ನು ಕಲಘಟಗಿ ಸರಕಾರಿ ಆಸ್ಪತ್ರೆಯಲ್ಲಿ ಪಡೆದಿರುತ್ತೇನೆ. ಅದೇ ದಿನ ಚಾಸಾ.31, 32 ಮತ್ತು 33 ರವರ ಹೇಳಿಕೆ ಪಡೆದಿರುತ್ತೇನೆ.

ಚಾಸಾ.6 ಮತ್ತು 7 ರವರಿಗೆ ನೋಟೀಸು ನೀಡಿ ಚಾಸಾ.1 ರವರು ತೋರಿಸಿದಂತೆ ನಿಶಾನೆ ಪಿ–2 ರ ಪ್ರಕಾರ ಗುನ್ನಾ ಸ್ಥಳ ಮತ್ತು ಜಪ್ತ ಪಂಚನಾಮೆಯನ್ನು ಚಾಸಾ.1 ರವರ ಮನೆಯ ಹತ್ತಿರ ಮಧ್ಯಾಹ್ನ 3.30 ರಿಂದ 4.30 ಗಂಟೆಯವರೆಗೆ ಮಾಡಿದ್ದು ನಿಶಾನೆ ಪಿ–2 ರಲ್ಲಿ ನನ್ನ ಸಹಿಯನ್ನು ನಿಶಾನೆ ಪಿ–2(ಜಿ) ಎಂದು ಗುರುತಿಸಲಾಯಿತು.

ಅದೇ ಸ್ಥಳದಲ್ಲಿ ಬಿದ್ದಿದ್ದ (1) ಒಂದು ಕಬ್ಬಿಣದ ಪೈಪು ಇದರ ಉದ್ದ 4 ಅಡಿ 3 ಇಂಚು ಸುತ್ತಳತೆ ನಾಲ್ಕುವರೆ ಇಂಚು ಇರುತ್ತದೆ ಅದನ್ನು ಈಗಾಗಲೇ ಎಂ ಓ .1 ಎಂದು ಗುರುತಿಸಲಾಗಿದ್ದು ತೋರಿಸಲಾಗಿ ನೋಡಿ ಗುರುತಿಸಿರುತ್ತಾರೆ.

ಇವುಗಳನ್ನು ಪಂಚರ ಸಮಕ್ಷಮ ಜಪ್ತ ಮಾಡಿ,ಸ್ಥಳದಲ್ಲಿ ನಿಶಾನೆ ಪಿ–2 ಎಂದು ಪಂಚನಾಮೆ ಮಾಡಿದ್ದು ಅದರಲ್ಲಿ ನನ್ನ ಸಹಿಯನ್ನು ನಿಶಾನೆ ಪಿ–2(ಎಚ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಪೋಟೋ ಮತ್ತು ಕಚ್ಚಾ ನಕ್ಷೆ ತಯಾರಿಸಿರುತ್ತೇನೆ. ನಿಶಾನೆ ಪಿ–3, 4, 5 ಪೋಟೋಗಳನ್ನು ಸಾಕ್ಷಿ ನೋಡಿ

ಗುರುತಿಸಿರುತ್ತಾರೆ. ಕಚ್ಚಾ ನಕ್ಷೆಯನ್ನು ಈಗ ನೋಡುತ್ತಿದ್ದು ನಿಶಾನೆ ಪಿ–83 ಎಂದು ಮತ್ತು ನನ್ನ ಸಹಿಯನ್ನು ನಿಶಾನೆ ಪಿ–83(ಎ) ಎಂದು ಗುರುತಿಸಲಾಯಿತು. ಜಪ್ತಾದ ವಸ್ತುಗಳನ್ನು ಠಾಣೆಗೆ ತಂದು ಠಾಣೆಯ ಮಾಲು ಪಟ್ಟಿ ಸಂಖ್ಯೆ 91/2019 ರ ಪ್ರಕಾರ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ದಿನಾಂಕ 11.09.2019 ರಂದು ಚಾಸಾ.16 ರವರ ಹೇಳಿಕೆಯನ್ನು ಜಮ್ಮಿಹಾಳ ಗ್ರಾಮದಲ್ಲಿ ಪಡೆದಿರುತ್ತೇನೆ. ಅದೇ ದಿನ ಚಾಸಾ.17, 18, 21 ರಿಂದ 23 ರವರ ಹೇಳಿಕೆ ಪಡೆದಿರುತ್ತೇನೆ.

ದಿನಾಂಕ 12.09.2019 ರಂದು ಗಾಯಾಳು ಚಾಸಾ.14 ರವರ ಹೇಳಿಕೆಯನ್ನು ಧಾರವಾಡದ ಎಸಡಿಎಂ ಆಸ್ಪತ್ರೆಯಲ್ಲಿ ಹಾಗೂ ಚಾಸಾ.15 ರವರ ಹೇಳಿಕೆಯನ್ನು ಹುಬ್ಬಳ್ಳಿಯ ಬಾಲಾಜಿ ಆಸ್ಪತ್ರೆಯಲ್ಲಿ ಪಡೆದಿರುತ್ತೇನೆ.

ದಿನಾಂಕ 13.09.2019 ರಂದು ಜಮ್ಮಿಹಾಳ ಗ್ರಾಮದಲ್ಲಿ ಚಾಸಾ.25 ರಿಂದ 30 ರವರ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಚಾಸಾ.36 ರವರಿಗೆ ಚಾಸಾ.1 ರವರ ಮನೆಯ ಉತಾರೆ ನೀಡಲು ಪತ್ರವನ್ನು ನಿಶಾನೆ ಪಿ–39 ರ ಪ್ರಕಾರ ಬರೆದಿರುತ್ತೇನೆ. ನನ್ನ ಸಹಿಯನ್ನು ನಿಶಾನೆ ಪಿ–39(ಎ) ಎಂದು ಗುರುತಿಸಲಾಯಿತು. ಕಲಘಟಗಿ ಲೋಕೋಪಯೋಗಿ ಇಲಾಖೆಗೆ ಕೃತ್ಯ

ನಡೆದ ಸ್ಥಳದ ನಕ್ಷೆ ತಯಾರಿಸಿಕೊಡುವಂತೆ ಪತ್ರ ಬರೆದಿರುತ್ತೇನೆ. ಸದರಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ-88 ಎಂದು ಗುರುತಿಸಲಾಯಿತು. ಸದರಿ ನಕ್ಷೆಯನ್ನು ಈಗಾಗಲೇ ನಿಶಾನೆ ಪಿ-43 ಎಂದು ಗುರುತಿಸಲಾಗಿದ್ದು, ಅದರ ಕವರಿಂಗ ಲೇಟರನ್ನು ಈ ದಿನ ನಿಶಾನೆ ಪಿ-89 ಎಂದು ಗುರುತಿಸಲಾಯಿತು. ನನ್ನ ಸಹಿಯನ್ನು ನಿಶಾನೆ ಪಿ-89(ಎ) ಎಂದು ಗುರುತಿಸಲಾಯಿತು.

ಅದೇ ದಿನ ಕಲಘಟಗಿಯ ಹೆಸ್ಕಾಂ ಇಲಾಖೆಗೆ ಪತ್ರ ಬರೆದು ಅಪರಾಧ ನಡೆದ ದಿನ ಸ್ಥಳದಲ್ಲಿ ವಿದ್ಯುತ ಸಂಪರ್ಕ ಇದ್ದ ಬಗ್ಗೆ ಮಾಹಿತಿ ಕೊಡುವಂತೆ ಪತ್ರ ಬರೆದಿದ್ದು ಸದರಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ-90 ಎಂದು ಮತ್ತು ನನ್ನ ಸಹಿಯನ್ನು ನಿಶಾನೆ ಪಿ-90(ಎ) ಎಂದು ಗುರುತಿಸಲಾಯಿತು.

ಅದೇ ದಿನ ಬೆಳಿಗ್ಗೆ 10 ಗಂಟೆಗೆ 5 ನೇ ಆರೋಪಿಯನ್ನು ಕಣವಿ ಹೊನ್ನಾಪುರ ಬಸ್ಸಸ್ಟ್ಯಾಂಡ ಹತ್ತಿರ ದಸ್ತಗಿರಿ ಮಾಡಿ ಠಾಣೆಗೆ ಕರೆದುಕೊಂಡು ಬಂದಿದ್ದು ಆತನನ್ನು ವಿಚಾರಿಸಿ ಆತನ ಸ್ವಖುಷಿ ಹೇಳಿಕೆ ಪಡೆದಿರುತ್ತೇನೆ. ಆತನ ಸ್ವಖುಪಿ ಹೇಳಿಕೆಯಲ್ಲಿ ನನ್ನನ್ನು ಕರೆದುಕೊಂಡು ಹೋದರೆ ನಾನು ಒಳಸಂಚು ರೂಪಿಸಿದ ಮತ್ತು ಬಟ್ಟೆಗಳನ್ನು ಎಸೆದ ಸ್ಥಳವನ್ನು ತೋರಿಸುತ್ತೇನೆ ಎಂದು

ಹೇಳಿರುತ್ತಾನೆ. ಸದರಿ ಹೇಳಿಕೆಯ ಭಾಗವನ್ನು ನಿಶಾನೆ ಪಿ–91 ಎಂದು ಗುರುತಿಸಲಾಯಿತು. ಸದರಿ ಆರೋಪಿಯನ್ನು ರಿಮಾಂಡ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನಂತರ ಮುಂದಿನ ತನಿಖೆ ಮತ್ತು ವಸ್ತುಗಳ ಜಪ್ತ ಕುರಿತು ದಿನಾಂಕ 17.09.2019 ರಿಂದ 19.09.2019 ರವರೆಗೆ ಆರೋಪಿ 1, 3, 4, 7, 10 ಮತ್ತು 17 ರವರನ್ನು ನ್ಯಾಯಾಲಯದಿಂದ ಪಿಸಿ ಕಸ್ಟಡಿಗೆ ಪಡೆದಿರುತ್ತೇನೆ.

ದಿನಾಂಕ 18.09.2019 ರಂದು ಪಂಚರಾದ ಚಾಸಾ.8 ಮತ್ತು 9 ರವರಿಗೆ ನೋಟೀಸು ನೀಡಿ ಕರೆಸಿಕೊಂಡು ಆರೋಪಿತರು ಸ್ವಖುಷಿ ಹೇಳಿಕೆಯಲ್ಲಿ ಹೇಳಿದಂತೆ ಅವರು ಹಾಜರುಪಡಿಸುವ ಆಯುಧಗಳ ಮತ್ತು ಮೊಬೈಲ ಫೋನಗಳ ಜಪ್ತ ಪಂಚನಾಮೆ ಮಾಡಲು ಸಹಕರಿಸುವಂತೆ ಪಂಚರಿಗೆ ಕೋರಿಕೊಂಡಿರುತ್ತೇನೆ. ಈ ಎಲ್ಲಾ ಆಯುಧಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಮತ್ತು ಮೊಬೈಲ ಫೋನಗಳನ್ನು ತಿಳಿ ಹಸಿರು ಬಣ್ಣದ ಪೇಪರ ಪ್ಯಾಕನಲ್ಲಿ ಪ್ರತ್ಯೇಕವಾಗಿ ಪ್ಯಾಕ ಮಾಡಿ ಸೀಲ ಮಾಡಿ ನನ್ನ ಮತ್ತು ಪಂಚರ ಸಹಿಯನ್ನು ಪಡೆದು ನಿಶಾನೆ ಪಿ–11 ಮಹಜರನ್ನು ಸ್ಥಳದಲ್ಲಿ ಮಾಡಿ ಸಹಿ ಪಡೆದಿರುತ್ತೇನೆ. ನನ್ನ ಸಹಿಯನ್ನು ನಿಶಾನೆ ಪಿ–11(ಡಿ) ಎಂದು ಗುರುತಿಸಲಾಯಿತು.

ದಿನಾಂಕ 21.09.2019 ರಂದು ಕಲಘಟಗಿ ತಹಶೀಲ್ದಾರವರಿಂದ ಆರೋಪಿ 2 ರವರ ಜಮೀನಿನ ಉತಾರನ ಆರಟಿಸಿಯನ್ನು ಪಡೆದಿರುತ್ತೇನೆ. ಸದರಿ ಆರಟಿಸಿಯನ್ನು ಈಗ ನೋಡುತ್ತಿದ್ದು ನಿಶಾನೆ ಪಿ–92 ಎಂದು ಗುರುತಿಸಲಾಯಿತು.

ಚಾಸಾ.10 ಮತ್ತು 11 ರವರ ಸಮಕ್ಷಮ ಚಾಸಾ.16 ರವರು ಹಾಜರುಪಡಿಸಿದ ಒಂದು ರಕ್ತ ಹತ್ತಿದ ಟೀ ಶರ್ಟನ್ನು ಮಧ್ಯಾಹ್ನ 12.15 ರಿಂದ 1.00 ಗಂಟೆಯವರೆಗೆ ನಿಶಾನೆ ಪಿ–16 ರ ಪ್ರಕಾರ ಜಪ್ತು ಪಂಚನಾಮೆಯನ್ನು ಮಾಡಿ ವಶಪಡಿಸಿಕೊಂಡಿರುತ್ತೇನೆ. ಸದರಿ ನಿಶಾನೆ ಪಿ–16 ರಲ್ಲಿ ನನ್ನ ಸಹಿ ನಿಶಾನೆ ಪಿ–16(ಸಿ) ಎಂದು ಗುರ್ತಿಸಲಾಯಿತು. ಸದರಿ ಟೀ ಶರ್ಟನ್ನು ಈಗಾಗಲೇ ಎಂ ಓ.25 ಎಂದು ಗುರುತಿಸಲಾಗಿದೆ.

ಕಲಘಟಗಿ ಹೆಸ್ಕಾಂ ಇಲಾಖೆಯಿಂದ ಘಟನಾ ಸ್ಥಳದಲ್ಲಿ ಘಟನೆ ಆದ ದಿನ ವಿದ್ಯುತ ಸರಬರಾಜು ಇದ್ದ ಬಗ್ಗೆ ಮಾಹಿತಿ ಕೊಟ್ಟಿದ್ದು ಅದರಲ್ಲಿ ಸಂಜೆ 6 ಗಂಟೆಯಿಂದ 9 ಗಂಟೆಯವರೆಗೆ ಜಮ್ಮಿಹಾಳ ಗ್ರಾಮದಲ್ಲಿ ವಿದ್ಯುತ ಸರಬರಾಜು ಇರುತ್ತದೆ ಎಂದು ಕೊಟ್ಟ ಸರ್ಟಪಿಕೇಟನ್ನು ನಿಶಾನೆ ಪಿ–99 ಎಂದು ಸ್ವೀಕರಿಸಿದ ಬಗ್ಗೆ ನನ್ನ ಸಹಿಯನ್ನು ನಿಶಾನೆ ಪಿ–99(ಎ) ಎಂದು ಗುರುತಿಸಲಾಯಿತು.

ದಿನಾಂಕ 11.10.2019 ರಂದು ಈ ಪ್ರಕರಣದಲ್ಲಿ ಜಪ್ತಾದ ಒಟ್ಟು 42 ವಸ್ತುಗಳನ್ನು ರಾಸಾಯನಿಕ ಪರೀಕ್ಷೆ ಕುರಿತು ಚಾಸಾ.44 ರ ಮುಖಾಂತರ ಬೆಳಗಾವಿ ಎಫಎಸಎಲಗೆ ಕಳಿಸಿರುತ್ತೇನೆ. ಈ ಬಗ್ಗೆ ನಮ್ಮ ಕಚೇರಿಯಿಂದ ಬರೆದ ಪತ್ರವನ್ನು ನಿಶಾನೆ ಪಿ-102 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-102(ಎ) ಎಂದು ಗುರುತಿಸಲಾಯಿತು. ಸದರಿ ಪತ್ರದೊಂದಿಗೆ ಸೂಚನಾ ಪತ್ರ, ಪರೀಕ್ಷೆಗೆ ಕಳುಹಿಸಿದ ವಸ್ತುಗಳ ವಿವರಗಳು, ಸ್ಯಾಂಪಲ ಸೀಲ ಮತ್ತು ಸಂಬಂದಪಟ್ಟ ದಾಖಲೆಗಳನ್ನು ಲಗತ್ತಿಕರಿಸಲಾಗಿದೆ (ಪುಟ ಸಂಖ್ಯೆ 66/01 ರಿಂದ 66/15 ರವರೆಗೆ)

ನಂತರ ದಿನಾಂಕ 16.10.2019 ರಂದು ಎಫಎಸಎಲ ಬೆಳಗಾವಿ ಇವರ ಸ್ವೀಕೃತಿ ಪತ್ರವನ್ನು ಪಡೆದಿರುತ್ತೇನೆ. ಸದರಿ ಪತ್ರವನ್ನು ನಿಶಾನೆ ಪಿ-103 ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ.44 ರವರ ಹೇಳಿಕೆ ಪಡೆದಿರುತ್ತೇನೆ.

ದಿನಾಂಕ 05.11.2019 ರಂದು ಕಲಘಟಗಿ ಲೊಕೋಪಯೋಗಿ ಇಲಾಖೆಯಿಂದ ಕೃತ್ಯ ಸ್ಥಳದ ನಕಾಶೆಯನ್ನು ಸ್ವೀಕರಿಸಿರುತ್ತೇನೆ. ಅದನ್ನು ಈಗಾಗಲೇ ನಿಶಾನೆ ಪಿ-43 ಎಂದು ಗುರುತಿಸಲಾಗಿದ್ದು, ಕವರಿಂಗ ಲೇಟರ ಈಗಾಗಲೇ ನಿಶಾನೆ ಪಿ-89 ರಲ್ಲಿ ಅದನ್ನು ಸ್ವೀಕರಿಸಿದ ಬಗ್ಗೆ ನನ್ನ ಸಹಿ ಇದ್ದು

ಅದನ್ನು ಈಗಾಗಲೇನಿಶಾನೆ ಪಿ–89(ಎ) ಎಂದು ಗುರುತಿಸಲಾಗಿದೆ.

ಅದೇ ದಿನದಂದು ಎಸಡಿಎಂ ಆಸ್ಪತ್ರೆಯಿಂದ ಚಾಸಾ14 ಮತ್ತು 16 ರವರ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿದ್ದು ಅದನ್ನು ಈಗಾಗಲೇ ನಿಶಾನೆ ಪಿ–47 ಮತ್ತು 48 ಎಂದು ಗುರುತಿಸಲಾಗಿದ್ದು ನನ್ನ ಸಹಿಯನ್ನು ನಿಶಾನೆ ಪಿ–47(ಎ) ಮತ್ತು 48(ಎ) ಎಂದು ಗುರುತಿಸಲಾಯಿತು.

ಅದೇ ದಿನ ತಹಶೀಲ್ದಾರ ಕಲಘಟಗಿಯವರಿಂದ ಮೃತ ವೀರಭದ್ರಪ್ಪ ಸತ್ತೂರನ ಜಮೀನಿಗೆ ಸಂಬಂಧಪಟ್ಟ ಆರಟಿಸಿಯನ್ನು ಹಾಜರುಪಡಿಸಿದ್ದು ಅದನ್ನು ಈಗಾಗಲೇ ನಿಶಾನೆ ಪಿ–92 ಎಂದು ಗುರುತಿಸಲಾಗಿದ್ದು ನನ್ನ ಸಹಿಯನ್ನು ನಿಶಾನೆ ಪಿ–92(ಎ) ಎಂದು ಗುರುತಿಸಲಾಯಿತು. ಅಕ್ಕಿ ಬಸವರಾಜ ತಂದೆ ಸಂಗಪ್ಪ 2 ನೇ ಆರೋಪಿಯ ಜಮೀನಿಗೆ ಸಂಬಂಧಪಟ್ಟ ಆರಟಿಸಿಯನ್ನು ಅದೇ ದಿನ ಸ್ವೀಕರಿಸಿದ್ದು ಅದನ್ನು ನಿಶಾನೆ ಪಿ–104 ಎಂದು ಮತ್ತು ನನ್ನ ಸಹಿಯನ್ನು ನಿಶಾನೆ ಪಿ–104(ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ.36 ಪಿಡಿಓ ಗ್ರಾಮ ಪಂಚಾಯತಿ, ದೇವಲಿಂಗೇಕೊಪ್ಪ ಗ್ರಾಮ ಇವರಿಂದ ಚಾಸಾ.1 ರವರ ಮನೆಯ ಬಗ್ಗೆ ದೃಡೀಕರಣ ಪತ್ರವನ್ನು ಪಡೆದುಕೊಂಡಿದ್ದು ಅದನ್ನು ಈಗಾಗಲೇ ನಿಶಾನೆ ಪಿ–

40 ಎಂದು ಗುರುತಿಸಲಾಗಿದ್ದು ನನ್ನ ಸಹಿಯನ್ನು ನಿಶಾನೆ ಪಿ-40(ಬಿ) ಎಂದು ಗುರುತಿಸಲಾಯಿತು.

ದಿನಾಂಕ 06.11.2019 ರಂದು ತಹಶೀಲ್ದಾರ ರವರಿಂದ 5 ನೇ ಆರೋಪಿ ಮಲ್ಲೇಶಪ್ಪ ಚುಳಕಿ ಇವರ ಜಮೀನಿಗೆ ಸಂಬಂಧಪಟ್ಟ ಆರಟಿಸಿಯನ್ನು ಪಡೆದುಕೊಂಡಿದ್ದು ಅದನ್ನು ಈಗಾಗಲೇ ನಿಶಾನೆ ಪಿ-55 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಶಾನೆ ಪಿ-55(ಎ) ಎಂದು ಗುರುತಿಸಲಾಯಿತು.

ದಿನಾಂಕ 06.12.2019 ರಂದು ಪ್ರಕರಣದ ತನಿಖೆಯನ್ನು ಪೂರೈಸಿ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷಾಧಾರಗಳು ಕಂಡು ಬಂದ ಕಾರಣ ಅಂತಿಮ ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಎಫಎಸಎಲ ವರದಿ, ವೈದ್ಯರ ಅಭಿಪ್ರಾಯ ಮತ್ತು ಎಫಎಸಎಲನಿಂದ ವಸ್ತುಗಳನ್ನು ಪಡೆದು ನ್ಯಾಯಾಲಯಕ್ಕೆ ಹಿಂತಿರುಗಿಸುವ ಕೆಲಸವನ್ನು ಬಾಕಿ ಇಟ್ಟು ಅಂತಿಮ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಮತ್ತು ಈ ಬಗ್ಗೆ ದೋಷಾರೋಪಣೆ ಪಟ್ಟಿಯಲ್ಲಿ ನಮೂದಿಸಿರುತ್ತೇನೆ.

ದಿನಾಂಕ 20.08.2020 ರಂದು ಬೆಳಗಾವಿ ಎಫಎಸಎಲ ವರದಿಯನ್ನು ಸ್ವೀಕರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಎಫಎಸಎಲ

ವರದಿಯನ್ನು ನಿಶಾನೆ ಪಿ–119 ಎಂದು ಮತ್ತು ಸ್ವೀಕರಿಸಿದ ಬಗ್ಗೆ ನನ್ನ ಸಹಿಯನ್ನು ನಿಶಾನೆ ಪಿ–119(ಎ) ಎಂದು ಗುರುತಿಸಲಾಯಿತು. ಜಪ್ತಾದ ಆಯುಧಗಳನ್ನು, ವೈದ್ಯರ ಅಭಿಪ್ರಾಯವನ್ನು ಮತ್ತು ವರದಿಯನ್ನು ದಿನಾಂಕ 20.04.2021 ರಂದು ಪಿ ಐ ಪ್ರಭು ಸೂರಿನ ಇವರು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಕಲಘಟಗಿ ಆಸ್ಪತ್ರೆಯ ವೈದ್ಯಾಧಿಕಾರಿ ಯವರು ಆಯುಧದ ಮೇಲೆ ಕೊಟ್ಟ ಅಭಿಪ್ರಾಯವನ್ನು ಈಗಾಗಲೇ ನಿಶಾನೆ ಪಿ–29 ಮತ್ತು 30 ಎಂದು ಗುರುತಿಸಲಾಗಿದ್ದು ಅದನ್ನು ಪ್ರಭು ಸೂರಿನವರು ದಿನಾಂಕ 20.04.2021 ರಂದು ಪಡೆದಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಂಬಿಬಿ (ಎಲಎಡಿಸಿ) ವಕೀಲರಿಂದ**

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಇದೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.